

ಕಥಾ ಬರೆವಣಿಗೆ ಅರೆಪ್ರಜ್ಞಾವಸ್ಥೆಯಲ್ಲಿ ಜರಗುವುದರಿಂದ ಅದು ವಾಸ್ತವ ಮತ್ತು ಕಲ್ಪನೆಗಳನ್ನು ಒಳಗೊಂಡು ಅವೆರಡನ್ನೂ ಮೀರಿದ ಕನಸಿಗೆ ಸನಿಹದಲ್ಲಿರುವ ವಿಸ್ಮಯ. ಬಾವಿಯಲ್ಲಿ ಬಿದ್ದಾಗ ಕಥೆಗಳಾಗಿಯೂ ನದಿಯಲ್ಲಿ ಬಿದ್ದಾಗ ಕಾದಂಬರಿಯೂ ಆಗುವ ಶಬ್ದಮಳೆಗೆ ಲೇಖಕನ ಕೈ ಹಿಡಿದು ನಡೆಸುವ ಸ್ವಯಂಚಾಲಿತ ಗುಣ ಇರುವುದನ್ನು ನಂಬಿದವನು ನಾನು. ಬರೆಯುವುದೆಂದರೆ ಕನಸು ಕಾಣುತ್ತ ಸಾಗುವುದು; ನನ್ನ ಕಥೆಗಳಲ್ಲಿ ಪಾತ್ರಗಳಾಗಿ ಬಂದ ವ್ಯಕ್ತಿಗಳು ಮರು ದಿನ ಸಂತೆಯಲ್ಲಿ ಭೇಟಿಯಾದರೆ ನನ್ನ ಗುರುತಿಸದೆ, ಮಾತಾಡದೆ ಅಪರಿಚಿತರಂತೆ ಹೊರಟು ಹೋಗುತ್ತಾರೆ; ಕಥೆಯಲ್ಲಿ ಸಾಧ್ಯವಾಗುವಂತೆ ನಾನೂ ಕೂಡ ಜೀವಂತ ಸೇತುವೆಯಾಗಿ ಅವರೊಂದಿಗೆ ವ್ಯವಹರಿಸಲಾರೆ; ಸ್ಪ್ಯಾನಿಶ್ ಕತೆಗಾರ ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಜ್‌ನ ಕಥೆಯೊಂದರಲ್ಲಿ ಪ್ರತಿ ರಾತ್ರಿ ಕನಸಿನಲ್ಲಿ ಬೆಡ್‌ರೂಮಿನಲ್ಲಿ ಪರಸ್ಪರ ಮಾತಾಡುವ ಪ್ರೇಮಿಗಳು ಕೊನೆವರೆಗೂ ನಿಜ ಜೀವನದಲ್ಲಿ ಭೇಟಿಯಾಗುವುದೇ ಇಲ್ಲ; ಅವಳಿಗೆ ಯಾವ ಊರಿನಲ್ಲಿ ತಾವು ಇದ್ದೇವೆ ಎಂಬುದೇ ಗೊತ್ತಿಲ್ಲ; ಅವನಿಗೆ ಹಗಲಲ್ಲಿ ರಾತ್ರಿ